**ಸಾಕ್ಷಿಗೆ ದಿನಾಂಕ : 17-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ.ಎಸ್.ಎಫ್.ಬಿ ವಕೀಲರಿಂದ ಆರೋಪಿ ಪರವಾಗಿ**

1. ನಾನು ವ್ಯವಸಾಯ ಮಾಡುತ್ತೇನೆ. ಆರೋಪಿತ ನನಗೆ ಬಹಳ ವರ್ಷಗಳಿಂದ ಪರಿಚಿತ. ಆರೋಪಿತನ ಪೂರ್ತಿ ಹೆಸರು ಮಹೇಶ ಜಕ್ಕೆಪ್ಪ ತಳ್ಳಿ ಅಲಿಯಾಸ್ ಜಕ್ಕಣ್ಣವರ. ಆರೋಪಿತ ತೇರದಾಳ ಗ್ರಾಮದ ಕುಡಚಿ ರಸ್ತೆ ಮತ್ತು ಸಸಾಲಟ್ಟಿಗೆ ಹೋಗುವ ರಸ್ತೆಯ ಮಧ್ಯದಲ್ಲಿ ಇದೆ ಎಂದು ಹೇಳುತ್ತಾರೆ. ಆರೋಪಿತ ಯಾವ ದಿನ ಹಣ ಕೇಳಿದ ಎಂದರೆ ಹಣ ಕೇಳಿದ ದಿನಾಂಕ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಿನಾಂಕದಂದು ಹಣ ಕೇಳಿದ ಎಂದು ನಿಮ್ಮ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿತನ ತನ್ನ ಮನೆಯ ಅಡಚಣೆ ಸಲುವಾಗಿ ಹಣ ಕೇಳಿದನು. ಯಾವ ಅಡಚಣೆ ಎಂದು ನೀವು ಆತನ ಮನೆಗೆ ಹೋಗಿ ಕೇಳಿದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಸ್ವತಃ ಒಬ್ಬ ಸಾಲಗಾರರು ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಒಟ್ಟು 4 ಏಕರೆ ಆಸ್ತಿ, ಸಹೋದರನ ಹೆಸರಿನಲ್ಲಿ 2 ಏಕರೆ 11 ಗುಂಟೆ ಆಸ್ತಿ ಇದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮದು ಒಟ್ಟು ಕುಟುಂಬ. ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತೇನೆ. ಕೇವಲ ಒಂದೇ ಉತಾರೆ ಹಾಜರಪಡಿಸಿದ್ದೀರಿ ಎಂದರೆ ನನ್ನ ಹೆಸರಿನಲ್ಲಿ ಇದ್ದ ಪಿತ್ರಾರ್ಜಿತ ಆಸ್ತಿ ಉತಾರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಗ್ರಾಮೀಣ ಬ್ಯಾಂಕಿನಿಂದ ಸದರಿ ಆಸ್ತಿಗೆ ಸಂಬಂಧಿಸಿದಂತೆ 2 ಲಕ್ಷ ರೂಪಾಯಿ ಪಡೆದಿದ್ದೀರಿ ಎಂದರೆ ಸರಿ. ಅದೇ ರೀತಿ ಪಿ.ಕೆ.ಪಿ.ಎಸ್ ನಿಂದ 50 ಸಾವಿರ ಸಾಲ ಪಡೆದಿದ್ದೀರಿ ಎಂದರೆ ಸರಿ. ನೀವು ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕಿನಿಂದ ಒಟ್ಟು 6 ಲಕ್ಷ 50 ಸಾವಿರ ರೂಪಾಯಿ ಸಾಲ ಪಡೆದಿದ್ದೀರಿ ಎಂದರೆ ಸಾಲ ಪಡೆದಿದ್ದು, ಅದನ್ನು ಹಿಂದಿರುಗಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಹೆಸರಿನಲ್ಲಿ 8 ಲಕ್ಷ 50 ಸಾವಿರ ಸಾಲ ಇದೆ ಎಂದರೆ ಸರಿಯಲ್ಲ.

2. ನನ್ನ 2 ಬ್ಯಾಂಕ ಖಾತೆಗಳು ಇವೆ. ಒಂದು ನಿರಾಣಿ ಶುಗರ್ಸನಲ್ಲಿ ಮತ್ತು ಇನ್ನೊಂದು ಕೆನರಾ ಬ್ಯಾಂಕ ಎಸ್.ಬಿ ಖಾತೆ ಎಂದು ಹೇಳುತ್ತಾರೆ. ಕೆನರಾ ಬ್ಯಾಂಕಿನ ಯಾವುದೇ ಖಾತಾ ಉತಾರೆ ಹಾಜರಪಡಿಸಿಲ್ಲ ಎಂದರೆ ಹಾಜರಪಡಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ನಿಪಿ-20 ರ ಪ್ರಕಾರ ಒಟ್ಟು 15 ವ್ಯವಹಾರಗಳನ್ನು ಸದರಿ ಖಾತೆಯಲ್ಲಿ ಮಾಡಿದ್ದೀರಿ ಎಂದರೆ ಸರಿ. ನಿಮಗೆ ದಿ:15.04.2023 ರಂದು ಹಣ ಎಲ್ಲಿಂದ ಬಂತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರಪಡಿಸಿಲ್ಲ ಎಂದರೆ ಹಾಜರಪಡಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಕಬ್ಬಿನ ಸ್ಲಿಪಗೆ

ಸಂಬಂಧಪಟ್ಟ ಮೊತ್ತ ನೇರವಾಗಿ ನಿಮ್ಮ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ. 3 ಲಕ್ಷ ರೂಪಾಯಿ ಯಾವ ದಿನಾಂಕದಂದು ನಿಮ್ಮ ಖಾತೆಯಿಂದ ತೆಗೆದಿರಿ ಎಂದು ಹೇಳಬಹುದಾ ಎಂದರೆ ಹಂತ ಹಂತವಾಗಿ ಕೆನರಾ ಬ್ಯಾಂಕ, ಸೊಸೈಟಿಯಿಂದ ತೆಗೆದುಕೊಂಡ ಬಂದ ಹಣವನ್ನು ಮನೆಯಲ್ಲಿ ಇಟ್ಟಿದ್ದೆ ಎಂದು ಸಾಕ್ಷಿ ಹೇಳುತ್ತಾರೆ. 2023 ರ 4 ನೇ ತಿಂಗಳಲ್ಲಿ ನಿಮ್ಮ ಖಾತೆಯಲ್ಲಿ ನಿಪಿ-21 ರಂತೆ ಕೇವಲ 69 ಸಾವಿರ ರೂಪಾಯಿ ಮಾತ್ರ ಹಣ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲೇ ಹಣ ತೆಗೆದುಕೊಂಡು ಬಂದು ಹಣ ಇಟ್ಟಿದ್ದೆ ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ನಿಮ್ಮ ದೂರಿನಲ್ಲಿ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ನೀವು ಕಳುಹಿಸಿದ ನೋಟಿಸಗೆ ಉತ್ತರ ನೀಡಿದ ವಿಷಯ ಗೊತ್ತಿದೆಯಾ ಎಂದರೆ ಗೊತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ.

3. ಶಿವಪ್ಪ ಗಂಗಪ್ಪ ಕುಲಗೋಡ ನಿಮಗೆ ಯಾವ ರೀತಿ ಪರಿಚಯಸ್ಥರು ಎಂದರೆ ಪರಿಯಸ್ಥರಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಲಕ್ಷ್ಮಣ ಕುಲಗೋಡ ಇವರು ಶಿವಪ್ಪ ಕುಲಗೋಡ ಇವರ ಸಹೋದರರು ಎಂದರೆ ನನಗೆ ಪರಿಚಯ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳು ನಿಮ್ಮ ಹೆಂಡತಿಯ ಸಹೋದರರು ಎಂದರೆ ಸರಿಯಲ್ಲ. ಸದರಿ ಇಬ್ಬರು ವ್ಯಕ್ತಿಗಳು ಪಲ್ಸ ಇಂಡಿಯಾ ಲಿಮಿಟೆಡ್ ಎಂಬ ವಿಮಾ ಕಂಪನಿಯ ಏಜೆಂಟ್ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತನೇ ಸದರಿ ಪಲ್ಸ ಇನ್ಸೂರೆನ್ಸ ಕಂಪನಿಗೆ ಶಿವಪ್ಪ ಮತ್ತು ಲಕ್ಷ್ಮಣ ಇವರನ್ನು ಪರಿಚಯ ಮಾಡಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಂಪನಿ ಈಗ ಬಂದ ಆಗಿದ್ದು, ಅದರಲ್ಲಿ ಹೂಡಿಕೆ ಮಾಡಿದ ಮೊತ್ತ ಬರುತ್ತಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅವರಿಬ್ಬರು ನಿಮ್ಮ ಹೆಂಡತಿಯ ಸಹೋದರಾರಾದ ಕಾರಣ ಆ ಚೆಕ್ಕನ್ನು ಉಪಯೋಗಿಸಿಕೊಂಡು ಸುಳ್ಳು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಲಕ್ಷ್ಮಣ ಕುಲಗೋಡ ಇವರು ಆರೋಪಿತನ ವಿರುದ್ದ ಸಿ.ಸಿ.ನಂ.1158/2023 ರಂತೆ ಬನಹಟ್ಟಿ ನ್ಯಾಯಾಲಯದಲ್ಲಿ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನಿಮಗೆ ಗೊತ್ತಿದ್ದರೂ ಸಹ ನಿಮ್ಮ ಅಳಿಯನಿಗೆ ಸಹಾಯ ಆಗಲೀ ಎಂದು ನೀವು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಮುಧೋಳ ನ್ಯಾಯಾಲಯದಲ್ಲಿ ಈ ಮೊದಲು ಸಹ ಖೊಟ್ಟಿ ರೀತಿಯಾ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಶ್ರೀಶೈಲ ಹೊಸಮನಿ ಅವರ ವಿರುದ್ದ 2018-19 ರಲ್ಲಿ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ